ಆ) ರಾಜ್ಯ ಬೇಹುಗಾರಿಕೆ ಇಲಾಖೆಯಲ್ಲಿರುವ ಸಿಬ್ಬಂದಿಗಳಿಗೆ ಆಧುನಿಕ ತಂತ್ರಜ್ಞಾನದ ಉಪಕರಣಗಳ ಬಳಕೆಯಲ್ಲಿ ಸೂಕ್ತ ತರಬೇತಿಯನ್ನು ಸತತವಾಗಿ ನುರಿತ ತಜ್ಞರಿಂದ ನೀಡಲಾಗಿದೆ. ಹಾಗೂ ಈ ಸಂಬಂಧ ಅನೇಕ ತರಬೇತಿ ಕಾರ್ಯಕ್ರಮಗಳನ್ನು ಇಲಾಖೆಯು ಇನ್ನು ಮುಂದೆಯೂ ಸಹ ನಡೆಸಲು ಉದ್ದೇಶಿಸಿರುತ್ತದೆ.

ಇ) ಆಧುನಿಕ ತಂತ್ರಜ್ಞಾನದ ತರಬೇತಿಯನ್ನು ಬೇಹುಗಾರಿಕೆ ದಳದ ಸಿಬ್ಬಂದಿಗಳಿಗೆ ನೀಡಿ, ಬೇಹುಗಾರಿಕೆ ದಳದ ಶಕ್ತಿ ಹೆಚ್ಚಿಸುವ ಬಗ್ಗೆ ಆರ್ಥಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ.

ಈ) ಸರ್ಕಾರವು ಸಂಪೂರ್ಣ ಪ್ರಮಾಣದಲ್ಲಿ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

1932 (2461) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :- ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದ ಕರಾವಳಿ ಜಿಲ್ಲೆಗಳ ನದಿ ನೀರಿನಲ್ಲಿ ಮಾನವ ಶ್ರಮದಿಂದ ದೋಣಿಯ ಮೂಲಕ ಚಿಪ್ಪುಗಳನ್ನು ಮತ್ತು ಮರಳನ್ನು ತೆಗೆಯುವ ಪಾರಂಪರಿಕ ವೃತ್ತಿ ನಿರತರಿಗೆ ನಿರ್ಬಂಧ ವಿಧಿಸಿರುವುದನ್ನು ಸಡಿಲಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

2) ಸಿ.ಆರ್.ಜೆಡ್ ವ್ಯಾಪ್ತಿಯೊಳಗೆ ಮರಳುಗಾರಿಕೆ ನಿಷೇಧದಿಂದ ಕೆಲವು ನದಿ ಪ್ರದೇಶದಲ್ಲಿ ಅತ್ಯಧಿಕ ಮಳೆ ಬೀಳುವುದರಿಂದ ಅಪಾರ ಪ್ರಮಾಣದ ಮರಳು ಕೊಚ್ಚಿ ಬಂದು ಕರಾವಳಿ ಪ್ರದೇಶದ ಭೂ-ಭಾಗಗಳಲ್ಲಿ ಮರಳುದಿಣ್ಣೆಗಳಾಗುವ ಮೂಲಕ ನದಿ ನೀರು ಸಮುದ್ರಕ್ಕೆ ಸೇರುವಲ್ಲಿನ ಅಡಚಣೆಗಳನ್ನು ಸರ್ಕಾರ ಗಮನಿಸಿದೆಯೇ;

3) ಹಾಗಿದ್ದಲ್ಲಿ ಆ ಕುರಿತು ಕೈಗೊಂಡ ಪರಿಹಾರ ಕ್ರಮಗಳೇನು;

4) ಕಡಲ ಕೊರೆತ್, ನದಿಪಾತ್ರ ಅಗಲವಾಗಿ ನೈಸರ್ಗಿಕ ಅನಾಹುತಗಳನ್ನು ತಪ್ಪಿಸಲು ನೆರವಾಗುವಂತೆ ಮಾನವ ಶ್ರಮದಿಂದ ದೋಣಿಗಳ ಮೂಲಕ ಮರಳುಗಾರಿಕೆ ಮಾಡುವ ಬಡ ಕಾರ್ಮಿಕ ವರ್ಗದವರಿಗೆ ಮರಳುಗಾರಿಕೆ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಲು ಅನುಮತಿ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜಿ. ಚನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

1) ಇಲ್ಲ

2) ಇಲ್ಲ

3) ಉದ್ಭವಿಸುವುದಿಲ್ಲ

4) ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಎಸ್.ಒ.114 (ಇ) ದಿನಾಂಕ 19.02.1991ರ ಕಂಡಿಕೆ 2 (ix) ರ ಅನ್ವಯ ಕಡಲ ತೀರ ನಿಯಂತ್ರಣ ವಲಯದಲ್ಲಿ (ಸಿ.ಆರ್.ಜಡ್) ಮರಳು ಮತ್ತು ಚಿಪ್ಪಿನಂತಹ ಇತರ ಕೆಳಪದರ ವಸ್ತುಗಳ ಗಣಿಗಾರಿಕೆಯನ್ನು ನಿಷೇದಿಸಲಾಗಿದೆ. ಆದುದರಿಂದ ಸದರಿ ಅಧಿಸೂಚನೆಯಲ್ಲಿನ ಅವಕಾಶಗಳನ್ನು ಸಡಲಿಸುವುದು ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯದ ವ್ಯಾಪ್ತಿಯಲ್ಲಿ ಬರುತ್ತದೆ. ಆದರೂ ಸಹ, ಇಲಾಖೆಯು ನದಿಯ ಇಳಿತ ರೇಖೆಯ ಕೆಳಗಡೆ ಮರಳು ಮತ್ತು ಚಿಪ್ಪು ಗಣಿಗಾರಿಕೆಯನ್ನು ಅನುಮತಿಸಬಹುದೇ ಎಂಬ ಬಗ್ಗೆ ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವನ್ನು ದಿನಾಂಕ 19.12.2006 ರಂದು ಕೋರಿರುತ್ತದೆ. ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಸದರಿ ಪತ್ರಕೆ ಇದುವರೆಗೂ ಉತ್ತರ ನೀಡಿರುವುದಿಲ್ಲ.

1933 (1741) ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು) :– ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಕಛೇರಿ ಮಂಜೂರಾತಿ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಆ) ಮಂಜೂರಾತಿ ನೀಡಲು ಇರುವ ಕಾನೂನಿನ ತೊಡಕೇನು;

ಇ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಈ ಪ್ರಸ್ತಾವನೆಗೆ ಡಿಜಿ ಮತ್ತು ಐಜಿಪಿರವರನ್ನು ದಿನಾಂಕ : 16/09/2006 ರಂದು ವರದಿ ಕೋರಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

1934 (2279) ಶ್ರೀ ಲಾಲಾಜಿ ಆರ್ ಮೆಂಡನ್ (ಕಾಪು) :– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?